## ಸರಿಗಮಪ: ಬೇಡವೆ ಹೊಸ ರೂಪ?

ಅಬ್ಬರದ ಪ್ರಚಾರದ ನಡುವೆ 'ಸರಿಗಮಪ' ಸೀಸನ್ 20 ಝೀ ಕನ್ನಡದಲ್ಲಿ ಪ್ರಾರಂಭವಾಗಿದೆ. ಕಣ್ಣು ಕೋರೈಸುವ ಸೆಟ್, ಶ್ರೀಮಂತಿಕೆಯ ಪೋಷಾಕಿನ ತೀರ್ಪುಗಾರರು, ನಿರೂಪಕಿ ಅನುಶ್ರೀ ವಾಗಾಡಂಬರ – ಎಲ್ಲವೂ ಎಂದಿನಂತಿದೆ. ಮಾಮೂಲಿ ಎನ್ನುವಂತೆ ಹಿಂದಿ ಧಾಟಿಯಲ್ಲಿ ಅರ್ಜುನ್ ಜನ್ಯಾಜೀ, ವಿಜಯ್ ಪ್ರಕಾಶ್ ಜೀ, ಮತ್ತು ಮಹಾ ಗುರೂಜೀ ಎಂಬ ಹೊಗಳಿಕೆ ಕೃತಕ ಎಂದೆನಿಸಿತು. ಬರಲಿರುವ ದಿನಗಳಲ್ಲಿ ಪ್ರತಿಭೆಗಳ ಕಿರುಪರಿಚಯದ ಜೊತೆ ಅವರ ಸಂಗೀತ ಸಿರಿಕಂಠದಿಂದ ಸರಿಗಮಪ ಉತ್ತಮವಾಗಿ ಬರುತ್ತದೆ ಎಂದು ಆಶಿಸೋಣ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## 'ಲಕ್ಷಣ'ವಾಗಿ ಮುಕ್ತಾಯ

ಅಂತೂ ಕಲರ್ಸ್ ಕನ್ನಡದ 'ಲಕ್ಷಣ' ಧಾರಾವಾಹಿ ಲಕ್ಷಣವಾಗಿಯೇ ಮುಗಿಯಿತು. ಅದರ ಆರಂಭದ ಕಂತುಗಳು ಮನಮುಟ್ಟುವಂತಿದ್ದವು. ಒಂದು ಚೌಕಟ್ಟಿನಲ್ಲಿ ಪಾತ್ರಗಳನ್ನು ವಿಸ್ತರಿಸಿದ್ದರು. ಪಾತ್ರಧಾರಿಗಳೂ ಚೆನ್ನಾಗಿಯೇ ಅಭಿನಯಿಸಿದರು. ಅನೇಕ ಘಟನೆಗಳು ಮರುಕಳಿಸುತ್ತ, ಬೇಸರವಾಗುತ್ತಿತ್ತು ಅನ್ನುವಾಗ್ಗೆ ಧಾರಾವಾಹಿ ಕೊನೆಗೊಂಡಿದೆ.

—ಡಾ. ಪ್ರಹ್ಲಾದ ಛಬ್ಬಿ, ಧಾರವಾಡ

## 'ಶ್ರೀರಸ್ತು ಶುಭಮಸ್ತು' ಸತ್ವ ಮುಂದುವರೆಯಲಿ

ಝೀ ಕನ್ನಡದ 'ಶ್ರೀರಸ್ತು ಶುಭಮಸ್ತು' ಧಾರಾವಾಹಿಯ ಕಥೆ ಮನಮುಟ್ಟುವಂತಿದೆ. ಪಾತ್ರಧಾರಿಗಳ ಹದವರಿತ ಅಭಿನಯ ಮತ್ತು ಸಂಭಾಷಣೆ ಸೊಗಸಾಗಿ ಮೂಡಿಬರುತ್ತಿದೆ. ಇತ್ತೀಚಿನ ಸಂಚಿಕೆಯಲ್ಲಿ ಮಾಧವ ಹಾಗೂ ತುಳಸಿ ಪತ್ರಕರ್ತರನ್ನು ಎದುರಿಸಿದ ರೀತಿ ಚೆನ್ನಾಗಿತ್ತು. ಹಾಗೆಯೇ ಸಮರ್ಥನಿಗೆ ದತ್ತಣ್ಣ ಬುದ್ಧಿ ಹೇಳಿದ ರೀತಿ ಹೃದಯಸ್ಪರ್ಶಿಯಾಗಿತ್ತು. ಮುಂದಿನ ಸಂಚಿಕೆಗಳಲ್ಲೂ ಕಥೆಯಲ್ಲಿ ಇದೇ ಸತ್ವ ಮುಂದುವರಿಯಲಿ.

—ಎಲ್.ಆರ್. ಚಂದ್ರಶೇಖರ್, ಲಿಂಗದಹಳ್ಳಿ

## 'ಬಿಗ್‌ಬಾಸ್' ಬಂದರು ದಾರಿ ಬಿಡಿ...

ಚಿತ್ರರಂಗದಲ್ಲಿ ಯಾವುದಾದರೂ ದೊಡ್ಡ ಬಜೆಟ್ ಅಥವಾ ಜನಪ್ರಿಯ ನಟನ ಸಿನಿಮಾ ಬಿಡುಗಡೆಯಾಗುವುದಿದ್ದರೆ, ಅದರ ಆಸುಪಾಸಿನಲ್ಲಿ ಸಣ್ಣಬಜೆಟ್ ಮತ್ತು ಹೊಸಕಲಾವಿದರ ಚಿತ್ರಗಳನ್ನು ಬಿಡುಗಡೆ ಮಾಡಲು ಹಿಂದೇಟು ಹಾಕುವುದು ಸಾಮಾನ್ಯ. ತಮ್ಮ ಸಿನಿಮಾ ದೊಡ್ಡ ಅಲೆಯಲ್ಲಿ ಕೊಚ್ಚಿ ಹೋಗದಿರಲಿ ಎಂಬ ಕಾಳಜಿ ಇದಕ್ಕೆ ಕಾರಣ. ಹಾಗೆಯೇ ಟೀವಿಯಲ್ಲಿ 'ಬಿಗ್ ಬಾಸ್'ನಂತಹ ರಿಯಾಲಿಟಿ ಶೋ ಸಂದರ್ಭದಲ್ಲಿ ಹೊಸ ಧಾರಾವಾಹಿ ಬರುವುದು ಕಡಿಮೆ. ಮಾತ್ರವಲ್ಲ, ಅದಕ್ಕಾಗಿ ಹಳೆಯ ಕೆಲವು ಧಾರಾವಾಹಿಗಳನ್ನು ತೆರವುಗೊಳಿಸಿ ಇದಕ್ಕೆ ದಾರಿಬಿಡುತ್ತಾರೆ.

—ರಮಾನಂದ ಶರ್ಮಾ, ನವದೆಹಲಿ

## ಬಗೆಹರಿಯದ ಪ್ರಶ್ನೆ ಹಾಗೂ ಸ್ಪರ್ಧಿಗಳ ಜಗಳ

ಕಲರ್ಸ್ ಕನ್ನಡದ 'ಬಿಗ್ ಬಾಸ್'ನಿಂದ ಏನು ಪ್ರಯೋಜನ? ಪ್ರೇಕ್ಷಕರಿಗೆ ಇದರ ಸಂದೇಶ ಏನು? ಅಂಥ ದೊಡ್ಡ ಮನೆಯಲ್ಲಿ ವೈಭೋಗ ಬದುಕು! ಅದಕ್ಕೆ ಎಷ್ಟೊಂದು ದುಡ್ಡು ಖರ್ಚು ಮಾಡಿರಬಹುದು? ಈ ಪ್ರಶ್ನೆಗಳನ್ನೆಲ್ಲ ಮರೆತು, ಶೋ ಸ್ಪರ್ಧಿಗಳು ಜಗಳ ಇಲ್ಲವೇ ಪಿಟೂರಿ ಹೆಣೆಯುವುದರಲ್ಲಿ ದೊಡ್ಡ ಮನೆಯಲ್ಲಿನ ದಿನಗಳನ್ನು ದೂಡುತ್ತಿದ್ದಾರೆ. ಈ ಅವಿವೇಕವನ್ನು ನೋಡಿದರೆ, 'ಬಿಗ್‌ಬಾಸ್' ಶೋಗೆ ಖರ್ಚು ಮಾಡುವ ಹಣವನ್ನು ವಾಹಿನಿ ಬೇರೆ ಕಾರ್ಯಗಳಿಗೆ ಖರ್ಚು ಮಾಡಬಹುದಿತ್ತೇನೊ?

—ಬಿ.ಎಸ್. ಮುಳ್ಳೂರ, ಹಲಗತ್ತಿ

## 'ತಪ್ಪಿಸ್ಥ' ಅಲ್ಲ, 'ತಪ್ಪಿತಸ್ಥ'

ಕಲರ್ಸ್ ಕನ್ನಡದ 'ಬಿಗ್ ಬಾಸ್' 10ನೇ ವರ್ಷಕ್ಕೆ ಕಾಲಿಟ್ಟಿರುವುದು ಹೆಮ್ಮೆಯ ವಿಷಯ. ಈ ಶೋವನ್ನು ನಾನು ತಪ್ಪದೆ ವೀಕ್ಷಿಸುತ್ತಾ ಬಂದಿದ್ದೇನೆ. ವಾರಾಂತ್ಯದಲ್ಲಿ 'ವಾರದ ಕಥೆ ಕಿಚ್ಚನ ಜೊತೆ'ಯಲ್ಲಿ ಸ್ಪರ್ಧಿಗಳೊಂದಿಗೆ ಮಾತುಕತೆ ನಡೆಸುವ ಸುದೀಪ್ ಈಚಿನ ಒಂದು ಕಾರ್ಯಕ್ರಮದಲ್ಲಿ ತಪ್ಪಿಸ್ಥ ಅನ್ನುವ ಪದವನ್ನು ಬಳಸಿದರು. ಅದು 'ತಪ್ಪಿತಸ್ಥ' ಎಂದು ಆಗಬೇಕಿತ್ತು. ಈ ಮೊದಲು ಎಂದೂ ಹೀಗೆ ಆಗಿರಲಿಲ್ಲ.

—ಎಂ.ಜೆ. ಅಭಿಷೇಕ್, ಬೆಂಗಳೂರು

### ವಾರದ ಪತ್ರ

## ಕಾನೂನು ಉಲ್ಲಂಘನೆಗೆ ದಂಡ ಹಾಕಿ

ಸೀರಿಯಲ್‌ಗಳಲ್ಲಿ ಹೆಲ್ಮೆಟ್ ಧರಿಸದೆ ದ್ವಿಚಕ್ರವಾಹನ, ಬೆಲ್ಟ್ ಇಲ್ಲದೆ ಕಾರನ್ನು ಡ್ರೈವ್ ಮಾಡುವ ದೃಶ್ಯಗಳು ಕಾಣಿಸುತ್ತವೆ. ಹಾಗೇ ತೋರಿಸಿದ ಮೇಲೆ ಅವರು ವಾಹನ ಚಲಾಯಿಸಿರುತ್ತಾರೆ. ಅದಕ್ಕೆ ವಾಹಿನಿಯವರೇ ಸಾಕ್ಷಿ ಸಮೇತ ತಮ್ಮ ಕಾನೂನು ಉಲ್ಲಂಘನೆಯನ್ನು ಪ್ರಕಟಿಸಿದ್ದಾರೆ. ಅಂದಮೇಲೆ ಅವರಿಗೆ ದಂಡವನ್ನು ವಿಧಿಸಬೇಕು ಅಲ್ಲವೇ? ನಾಗರಿಕರು ಕಾನೂನು ಉಲ್ಲಂಘಿಸಿದರೆ ಫೋಟೊ ತೋರಿಸಿ ದಂಡ ವಿಧಿಸುವ ಪೊಲೀಸರು, ಸಾರಿಗೆ ಕಾನೂನನ್ನು ರಾಜಾರೋಷವಾಗಿ ಉಲ್ಲಂಘಿಸಿ, ಅದನ್ನು ಹೆಮ್ಮೆಯಿಂದ ಪ್ರಸಾರ ಮಾಡುವ ವಾಹಿನಿಗಳ ಮೇಲೆ ಏಕೆ ಕ್ರಮ ಜರುಗಿಸುವುದಿಲ್ಲ.

—ಜಿ. ಮೃತ್ಯುಂಜಯ, ಬೆಂಗಳೂರು

## ಬಹು ಸೊಗಸು 'ಮರೆಯದ ಮಾಣಿಕ್ಯ'

ಚಂದನ ವಾಹಿನಿಯಲ್ಲಿ ಮೂಡಿ ಬರುತ್ತಿರುವ 'ಮರೆಯದ ಮಾಣಿಕ್ಯ'ದಲ್ಲಿ ಹೊಸ ಪ್ರತಿಭೆಗಳಿಗೆ ಅವಕಾಶ ಸಿಗುತ್ತಿದೆ. ಇದರಿಂದ ವೀಕ್ಷಕರಿಗೆ ಹಳೆಯ ಸುಮಧುರ ಚಿತ್ರಗೀತೆಗಳು ಕೇಳುವ ಭಾಗ್ಯ ಸಿಕ್ಕಂತೆ ಆಗಿದೆ. ಈಚೆಗೆ ಪ್ರಸಾರವಾದ ಅಭಿಜಿತ್ ಹಾಗೂ ಶ್ವೇತಾ ತಮ್ಮ ಗಾಯನವನ್ನು ವಿಭಿನ್ನವಾಗಿ ಪ್ರಸ್ತುತಪಡಿಸಿದರು. ಜಾಹೀರಾತು ಹಾಗೂ ಸೀರಿಯಲ್ ಹಾಡಿಗೆ ಗಾಯಕಿ ಧ್ವನಿ ನೀಡಿದರೆ, ಅಭಿಜಿತ್ ಕೀಬೋರ್ಡ್, ಗಿಟಾರ್‌ನಿಂದ ಅದನ್ನು ನುಡಿಸಿದ್ದು ವಿಶೇಷವಾಗಿತ್ತು.

—ಭಾರತೀ ಗಂಗಾಧರ್, ಬೆಂಗಳೂರು




## ಭಗವಂತ ನಕಲು ಮಾಡಬಹುದೆ?

ಝೀ ಕನ್ನಡದ 'ಭೂಮಿಗೆ ಬಂದ ಭಗವಂತ'ದಲ್ಲಿ ಎರಡು, ಮೂರು ದಿನಗಳಿಗೊಮ್ಮೆ ಬೇರೆ, ಬೇರೆ ಪ್ರಸಂಗಗಳಿರುವ ಸಂಚಿಕೆಗಳು ಮೂಡಿಬರುತ್ತಿವೆ. ಲಘು ಹಾಸ್ಯ ಹಾಗೂ ನೀತಿ ಬೋಧನೆಯಿಂದ ಇದು ಆಕರ್ಷಕ ಎಂದೆನಿಸುತ್ತಿದೆ. ಇತ್ತೀಚೆಗೆ ರಿಯಾಲಿಟಿ ಶೋ ಒಂದರ ಅನುಕರಣೆ ಮಾಡಿದರು ಎಂದೆನಿಸಿತು. ಅದರಲ್ಲಿ ಸ್ಪರ್ಧಿಗಳು ತಮ್ಮ ಸಹಸ್ಪರ್ಧಿಗಳನ್ನು ಅವರವರ ಆಟಕ್ಕೆ ಅನುಗುಣವಾಗಿ 'ಉತ್ತಮ' ಅಥವಾ 'ಕಳಪೆ' ಎಂದು ವರ್ಗೀಕರಿಸುತ್ತಾರೆ. ಅದೇ ಮಾದರಿಯಲ್ಲಿ ಇಲ್ಲಿ 'ಅಪ್ಪಟ' ಅಥವಾ 'ಲಂಪಟ' ಎಂದು ಬಳಕೆಯಾಗಿದೆ. 'ಲಂಪಟ' ಎನ್ನುವ ಪದ ಬಳಕೆ ಯೋಗ್ಯವಾದುದಲ್ಲ ಎಂದು ನನ್ನ ಭಾವನೆ.

—ಎಲ್.ಆರ್. ಚಂದ್ರಶೇಖರ್, ಲಿಂಗದಹಳ್ಳಿ